# ನ.26ರಿಂದ ಪರಿಕ್ರಮ ಫುಟ್ಬಾಲ್ ಟೂರ್ನಿ

**ವಿಕ ಸುದ್ದಿಲೋಕ** ಬೆಂಗಳೂರು

ಪರಿಕ್ರಮ ಫುಟ್ಬಾಲ್ ಚಾಂಪಿಯನ್‌ಷಿಪ್‌ನ ಐದನೇ ಆವೃತ್ತಿ ಇದೇ ತಿಂಗಳ 26ರಿಂದ 28ರ ವರೆಗೆ ನಗರದ ಜಾಲಹಳ್ಳಿ ಎಚ್‌ಎಂಟಿ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಈ ಬಾರಿ ಬೆಂಗಳೂರಿನ ವಿವಿಧ ಶಾಲೆಗಳ 14 ತಂಡಗಳು ಮತ್ತು ಕೇರಳ ಮತ್ತು ಪುದುಚೇರಿಯ ತಲಾ ಒಂದು ತಂಡಗಳು ಸೇರಿ ಒಟ್ಟು 16 ತಂಡಗಳು ಪ್ರಶಸ್ತಿಗಾಗಿ ಹೋರಾಟ ನಡೆಸಲಿವೆ. 16 ವರ್ಷದೊಳಗಿನವರ ಈ ಟೂರ್ನಿ ಲೀಗ್, ನಾಕೌಟ್ ಶೈಲಿಯಲ್ಲಿ ನಡೆಯಲಿದ್ದು, ಅಗ್ರ ತಂಡಗಳು ಪ್ರಧಾನ ಘಟ್ಟಕ್ಕೆ ಅರ್ಹತೆ ಪಡೆಯಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.